## ಪಶ್ಚಿಮ ವಲಯ ವ್ಯಾಪ್ತಿಯ ಮಲ್ಲೇಶ್ವರಂ ಉಪವಿಭಾಗದ ಸುಬ್ರಮಣ್ಯನಗರ ವಾರ್ಡ್-66ರಲ್ಲಿ ದಿನಾಂಕ: 20-03-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

**ವಾರ್ಡ್ ಸಂಖ್ಯೆ-66 ಸುಬ್ರಮಣ್ಯನಗರ** **ಸಮಯ ಬೆಳಿಗ್ಗೆ 11:00 ಘಂಟೆಗೆ**

ದಿನಾಂಕ: 20-03-2021 ರಂದು ವಾರ್ಡ್ ಸಂಖ್ಯೆ: 66ರ ಮಾರ್ಚ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 66ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು :**

| | |
|---|---|
| 1 | ಶ್ರೀಮತಿ ಸರಸ್ವತಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-66 ಸುಬ್ರಮಣ್ಯನಗರ |
| 2 | ಶ್ರೀ ಸುರೇಂದ್ರಕುಮಾರ್, ಕಿರಿಯ ಅಭಿಯಂತರರು, ವಾರ್ಡ್-66 ಸುಬ್ರಮಣ್ಯನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಎನ್. ಸುನಿಲ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು |
| 4 | ಶ್ರೀ ಶಿವರಾಜು ಮೂರ್ತಿ.ಡಿ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 5 | ಶ್ರೀಮತಿ ಅಮ್ರುತ.ಕೆ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 6 | ಶ್ರೀ ಸಿ.ಕೆ. ಕೃಷ್ಣಯ್ಯ, ವಾಟರ್ ಇನ್ಸ್‌ಪೇಕ್ಟರ್ |
| 7 | ಶ್ರೀ ಎನ್. ನಾಗರಾಜ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 8 | ಶ್ರೀ ಜಯರಾಂ.ಪಿ.ಎಲ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 9 | ಶ್ರೀ ಪೆದ್ದಣ್ಣ, ಹಿರಿಯ ಆರೋಗ್ಯ ಪರಿವೀಕ್ಷರು |
| 10 | ಶ್ರೀ ಕೆ ಶ್ರೀನಿವಾಸ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 11 | ಶ್ರೀಮತಿ ಡಾ॥ ಭಾರತಿ, ವೈದ್ಯಾಧಿಕಾರಿಗಳು |
| 12 | ಶ್ರೀ ಬಾಬು. ಆರ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 13 | ಶ್ರೀ ಮಹಲಿಂಗಯ್ಯ, ಎ.ಎಸ್.ಐ |
| 14 | ಶ್ರೀ ಕೆ. ಜಯಮೂರ್ತಿ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 15 | ಶ್ರೀಮತಿ ಭಾಗ್ಯ.ಆರ್, 9980401026 |
| 16 | ಶ್ರೀಮತಿ ರೇಣುಕಾ, ಕಂದಾಯ ವಸೂಲಿಗಾರರು |

Scanned with CamScanner

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀಮತಿ ಸರಸ್ವತಿ.ಡಿ. ನೋಡಲ್ ಅಧಿಕಾರಿಗಳು ವಾರ್ಡ್-66 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಕಂದಾಯ ಇಲಾಖೆ**

- ಕಂದಾಯ ಇಲಾಖೆಯಲ್ಲಿ ವೋಟರ್ ಐ.ಡಿ ವಿತರಿಸುವ ಬಗ್ಗೆ ಸಮಿತಿ ಸದಸ್ಯರು ಚರ್ಚಿಸಿದರು. ಸದರಿ ಸಭೆಯಲ್ಲಿ ಹಾಜರಿದ್ದ ಕಂದಾಯ ವಸೂಲಿಗಾರರಾದ ರೇಣುಕಾ ರವರು ವೋಟರ್ ಐ.ಡಿ ಗಳನ್ನು ಆನ್‌ಲೈನ್ ಮೂಲಕ ವಿತರಿಸುತ್ತಿದ್ದು, ಎಲ್ಲರೂ ಆನ್‌ಲೈನ್‌ನಲ್ಲಿಯೇ ಪಡೆಯುವಂತೆ ತಿಳಿಸಿದರು. ಹಾಗೂ ಈ ಸಂಬಂಧ ಸಾರ್ವಜನಿಕರಿಗೆ ಪ್ರಚಾರ ಮಾಡಲು ತಿಳಿಸಿದರು.

**ಆರೋಗ್ಯ ಇಲಾಖೆ (ಘನತ್ಯಾಜ್ಯ):**

- ಕೋವಿಡ್-19 ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಡಾ॥ ಭಾರತಿ ರವರು ನಮ್ಮ ವಾರ್ಡಿನ ಕೋವಿಡ್-19 ಸಾಂಕ್ರಮಿಕ ರೋಗದ ಬಗ್ಗೆ ಮಾಹಿತಿ ನೀಡಿದರು. ಲಸಿಕೆ ಹಾಕುವ ಕಾರ್ಯಕ್ರಮ ಪ್ರಗತಿಯಲ್ಲಿದ್ದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪಡೆಯುವಂತೆ ತಿಳಿಸಿದರು.
- ಕಸ ವಿಲೇವಾರಿ ಬಗ್ಗೆ ಚರ್ಚಿಸಲಾಯಿತು, ಕೆಂಪೇಗೌಡ ಉದ್ಯಾನವನ, ಇ.ಎಸ್.ಐ ಆಸ್ಪತ್ರೆ ಹತ್ತಿರ ಕಸ ತೆರವುಗೊಳಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಬಿಬಿಎಂಪಿ ಇಂಜಿನಿಯರಿಂಗ್ ವಿಭಾಗ**

- ವಾರ್ಡ್ ವ್ಯಾಪ್ತಿಯಲ್ಲಿ ಪಾಟ್‌ಹೋಲ್ಸ್ ಮುಚ್ಚುವ ಕೆಲಸ ಪ್ರಗತಿಸಿಲ್ಲಿದ್ದು, ಶೀಘ್ರವಾಗಿ ಮುಗಿಸುವಂತೆ ಸೂಚಿಸಲಾಯಿತು.

- ಕುಡಿಯುವ ನೀರಿನ ಕೊಳವೆಬಾವಿಗಳ ದುರಸ್ಥಿಗೆ ಕ್ರಮಕೈಗೊಳ್ಳುವಂತೆ ತಿಳಿಸಲಾಯಿತು. ಆರ್.ಓ ಪ್ಲಾಂಟ್ ಕೆಲಸ ಮುಗಿದಿದ್ದು, ಶೀಘ್ರವಾಗಿ ಪ್ರಾರಂಭಿಸಲು ಸೂಚಿಸಲಾಯಿತು.

Scanned with CamScanner

ಬಿಬಿಎಂಪಿ ಬೀದಿ ದೀಪ ವಿಭಾಗ

- ಬೀದಿ ದೀಪಗಳ ಬಗ್ಗೆ ತಪಾಸಣೆ ಮಾಡುವಂತೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರ್ ರವರಿಗೆ ತಿಳಿಸಲಾಯಿತು.

ಸಭೆಗೆ ಕೆಲವು ಇಲಾಖೆಯ ಅಧಿಕಾರಿಗಳು/ನೌಕರರುಗಳು ಗೈರು ಹಾಜರಿರುವುದರಿಂದ ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ತಿಳಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,
ಸಹಾಯಕ ಅಭಿಯಂತರರು, ವಾರ್ಡ್-66
ಸುಬ್ರಮಣ್ಯನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

ಸಹಿ/-
ಅಧ್ಯಕ್ಷರು
ನೋಡಲ್ ಅಧಿಕಾರಿಗಳು, ವಾರ್ಡ್-66
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner